# <u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ. 926/2018</u>

<u>ಸಾಕ್ಷಿದಾರರ ಹೇಳಿಕೆಃ</u>

| | | |
|---|---|---|
| **ಹೆಸರು** | ರೇವಣಗೌಡ | **ಚಾಸಾಃ 2 ಪ್ರಾಸಾಃ 2** |
| **ತಂದೆಯ ಹೆಸರು** | ರೇವಣಸಿದ್ದಣಗೌಡ | |
| **ವಯಸ್ಸು** | 54 ವರ್ಷ | |
| **ವೃತ್ತಿ** | ಕಾರ್ಯದರ್ಶಿ ಗ್ರಾಮ ಪಂಚಾಯಿತಿ | |
| **ವಾಸಸ್ಥಳ** | ದಾವಣಗೆರೆ | |

ದಿನಾಂಕಃ **23.06.2022** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

### <u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-</u>

ಸ್ಥಳ ಮಹಜರ್ ನ್ನು ಮತ್ತು ಕಚ್ಚಾ ನಕಾಶೆಯನ್ನು ಅವುಗಳಲ್ಲಿ ಇರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸ್ಥಳ ಮಹಜರ್ ಈಗಾಗಲೇ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 (ಬಿ)ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿಪಿ- 8 ಎಂದು ಸಾಕ್ಷಿ ಸಹಿಯನ್ನು ನಿಪಿ-8 (ಎ) ಎಂದು ಗುರುತಿಸಲಾಯಿತು.

ದಿಃ 28-06-2018 ರಂದು ನ್ಯಾಮತಿ ಠಾಣೆಯ ಪೊಲೀಸರು, ದಾನೇಹಳ್ಳಿ ಕೊರಚ್ಚಹಟ್ಟಿ, ಗ್ರಾಮದ ಗಿರಿಯಪ್ಪ ರವರ ಮನೆಯ ಹತ್ತಿರ ಪೊಲೀಸರು ಮತ್ತು ಗ್ರಾಮಸ್ಥರ ನಡುವೆಯಾದಂತಹ ಗಲಾಟೆಯ ವಿಚಾರಕ್ಕೆ ಸಂಬಂಧಿಸಿದಂತೆ ಮಹಜರ್ ನ್ನು ತಯಾರಿಸಲು ಬಂದಿದ್ದು, ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಮಹಜರ್ ನ್ನು ಬೆಳಗ್ಗೆ 10.00 ಗಂಟೆ ಯಿಂದ 11.00 ಗಂಟೆಯವರೆಗೆ ತಯಾರಿಸಿ ಒಂದು ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ. ಅಲ್ಲದೇ ಸದರಿ ಸ್ಥಳದಲ್ಲಿ ಒಂದು ಛಾಯಚಿತ್ರವನ್ನು ತೆಗೆದಿರುತ್ತಾರೆ . ಸದರಿ ಛಾಯಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ . ಪೊಲೀಸರು ವಶಪಡಿಸಿಕೊಂಡ ಕಲ್ಲನ್ನು

ನೋಡಿದರೆ ಗುರುತಿಸುತ್ತೇನೆ. ಸದರಿ ಕಲ್ಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂ . ಒ 1 ಎಂದು ಗುರುತಿಸಲಾಗಿದೆ .

**ಪಾಟೀ ಸವಾಲು:- ಆರೋಪಿತರ ಪರ ವಕೀಲರರಿಂದ:-**

ಮಹಜರ್ ಗೆ ಸಹಕಾರಿಸುವಂತೆ ಪೊಲೀಸರು ನನಗೆ ನೋಟೀಸನ್ನು ನೀಡಿದ್ದರು. ನಾನು ಘಟನಾ ಸ್ಥಳಕ್ಕೆ ಬೆಳಗ್ಗೆ 11.00 ಗಂಟೆ ಹೋಗಿದ್ದೆನು. ಘಟನಾ ಸ್ಥಳದಲ್ಲಿ ಮಹಜರ್ ನ್ನು ಮಾಡುವ ಸಂದರ್ಭದಲ್ಲಿ ಎಷ್ಟು ಜನರು ಇದ್ದರು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಪೊಲೀಸರು ಸ್ಥಳಕ್ಕೆ ಬೆಳಗ್ಗೆ 9.45 ರಿಂದ 10.00 ಗಂಟೆ ಸಮಯದಲ್ಲಿ ಬಂದರು. ನಾನು ಘಟನಾ ಸ್ಥಳಕ್ಕೆ ಹೋದ ಬಳಿಕ ಪೊಲೀಸರು ಬಂದಿರುತ್ತಾರೆ. ಘಟನಾ ಸ್ಥಳದ ಚೆಕ್ಕು ಬಂಧಿಯನ್ನು ನನಗೆ ಹೇಳಲಾಗುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ನಿಪಿ-2 ಮತ್ತು 8 ದಾಖಲೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-2 ಮತ್ತು 8 ದಾಖಲೆಗಳಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಸಿ/ಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**